ವಾಲಿದ. ಅವರೂ ಅವನೂ ಒಂದಾಗಿ ಕೆಳಗೆ ಬಿದ್ದರು. ಅವನ ದೇಹ ನಡುಗುವುದನ್ನು ನೋಡಿ, ಅವರಿಗೆ ಹೆದರಿಕೆಯಾಯಿತು. ತಕ್ಷಣ, 'ನಿನಗೆ ಇಷ್ಟಾ ಇಲ್ಲಾಂದ್ರೆ ಬಿಡು. ಅದಕ್ ಯಾಕೆ ಅಳ್ತೀ?' ಎನ್ನುತ್ತ ಅವನ ಹತ್ತಿರ ಹೋಗಿ ಬೆನ್ನನ್ನು ತಟ್ಟಿಕೊಟ್ಟರು. ನಂತರ ಅಪ್ಪನೂ ಅವರೂ ಅಂಗಡಿ ಬೀದಿಯ ಕಡೆ ನಡೆದರು. ಅವನು ಸೈಕಲನ್ನು ನೂಕಿಕೊಂಡು ಮನೆಗೆ ಬಂದು ಸೇರಿದ.

ಪಬ್ಲಿಕ್ ಪರೀಕ್ಷೆಗೆ ಎರಡು ದಿನಗಳು ಮಾತ್ರ ಇರುವ ಸಮಯದಲ್ಲಿ, ಮುತ್ತುಸಾಮಿಯ ಅಪ್ಪ ಮತ್ತು ಅಮ್ಮನಿಗೆ ಮತ್ತೆ ಹಿಂದಿನಂತೆ ಜಗಳ ಉಂಟಾಯಿತು. ಒಂದೇ ಶಬ್ದ. ಹೊಡೆತ. ಒದೆ. ಗಲಾಟೆ. ಮತ್ತೆ ಅವರು ಮನೆ ಬಿಟ್ಟು ಹೊರಟುಹೋದರು. ಮುತ್ತುಸಾಮಿ ಪರೀಕ್ಷೆ ಬರೆಯುವ ಆತಂಕದಲ್ಲಿದ್ದ. ಪ್ರತಿಯೊಂದು ವಿಷಯದಲ್ಲೂ ಎಂಬತ್ತು ತೊಂಬತ್ತು ಅಂಕಗಳನ್ನಾದರೂ ತೆಗೆದುಬಿಡಬೇಕೆಂದು ಅಂದುಕೊಂಡ. ಹೆಚ್ಚಿನ ಅಂಕ ಇದ್ದರೆ ಮಾತ್ರ, ಪಿಯುಸಿಯಲ್ಲಿ ಆಸೆಪಟ್ಟ ಸಬ್ಜೆಕ್ಟ್ ಸಿಗುವುದು ಎಂದು ಹೇಳಿದ ಹೆಡ್‌ಮಾಸ್ಟರ್‌ನ ಎಚ್ಚರಿಕೆಯ ಮಾತುಗಳು ಕಿವಿಯಲ್ಲಿ ದನಿಸುತ್ತಲೇ ಇದ್ದವು. ಅಮ್ಮನ ಸ್ಥಿತಿಯೂ ಪಾಪವಾಗೆ ಇತ್ತು. ಆದರೆ ಅವನು ಮನಸ್ಸಿನಲ್ಲಿ ಯಾವುದಕ್ಕೂ ಜಾಗಕೊಡದೆ ಓದುವುದರಲ್ಲಿ ಮಾತ್ರ ಗಮನವನ್ನು ಹರಿಸಿದ. ಬೆಳಗ್ಗೆ ನಾಲ್ಕು ಗಂಟೆಯ ಸೈರನ್ ಕೂಗುವಾಗಲೇ ಎದ್ದು ಓದಲು ತೊಡಗಿದನು. ಒಂದು ಸಲ ಓದಿದ್ದನ್ನು ಹತ್ತು ಸಲ ಬರೆದು ನೋಡಿದ. ಪರೀಕ್ಷೆಗಳೆಲ್ಲವೂ ಮುಗಿದಾಗ ಒಂದು ದೊಡ್ಡ ಹೊರೆಯನ್ನು ಇಳಿಸಿದಂತೆ ಇತ್ತು.

ಊಟದ ಖರ್ಚಿಗಾಗಿ ಅಮ್ಮ ಬೆಳಗ್ಗೆ ನರ್ಸಮ್ಮನ ಮನೆಗೆ ಅಡಿಗೆ ಕೆಲಸಕ್ಕೂ ಮಧ್ಯಾಹ್ನದ ಹೊತ್ತಿನಲ್ಲಿ ರೈಸ್ ಮಿಲ್ಲಿನಲ್ಲಿ ಅಕ್ಕಿ ಕೇರುವ ಕೆಲಸಕ್ಕೂ ಹೋಗುತ್ತಿದ್ದಳು.

ಎರಡು ದಿನ ಕಳೆದು ಸಂಜೆಯ ಸಮಯದಲ್ಲಿ ಅಬ್ದುಲ್ಲಾ ಮಾವ ಮನೆಗೆ ಬಂದರು. ಮೊರದಲ್ಲಿ ಅಕ್ಕಿ ಆರಿಸುತ್ತಿದ್ದ ಅಮ್ಮ ಅವರನ್ನು ನೋಡಿ ಎದ್ದು ನಿಂತು 'ಏನಾದ್ರೂ ಸುದ್ದಿ ಗೊತ್ತಾಯ್ತಾ ಅಣ್ಣ?' ಎಂದು ಕೇಳಿದಳು. 'ನಾನು ಹೋಗೋ ಜಾಗದಲ್ಲೆಲ್ಲಾ ವಿಚಾರಿಸ್ತಾನೆ ಇದೀನಿ, ಒಂದು ಸುಳಿವೂ ಸಿಕ್ತಿಲ್ಲಾಮ್ಮ' ಎಂದು ಅಬ್ದುಲ್ ಮಾಮಾ ಚಿಂತೆಯಿಂದ ಹೇಳಿದರು.

'ಸರಿ ಬಿಡಿ ಅಣ್ಣ, ಎಲ್ಲಾ ನನ್ನ ಹಣೆಬರಹ.'

'ಕಥಿರ್ಕಾಮದಿಂದ ಪತ್ತುಕ್ಕಣ್ಣು ಕಡೆಗೆ ಹೋಗೋದನ್ನ ನೋಡಿದ ಒಬ್ಬ ಆಸಾಮಿ ಹೇಳ್ದ. ನಾಳೆ ಹೋಗಿ ನೋಡೋಣಾಂದ್ರೆ ನಮ್ಮ ಅಂಗಡಿ ಹುಡುಗ ನಾಲ್ಕು ದಿನ ರಜೆ ಹಾಕಿಹೋಗಿದ್ದಾನೆ. ಏನು ಮಾಡೋದೂಂತ ಅರ್ಥ ಆಗ್ತಿಲ್ಲ...'

'ಜಾಗದ ಬಗ್ಗೆ ವಿವರ ಇವನ್ಹತ್ರ ಹೇಳಿ ಅಣ್ಣ. ಇವನು ಹೋಗಿ ನೋಡ್ಬರ್ಲಿ...'

ಅವರು ಗಾಬರಿಯಿಂದ 'ಇವನನ್ನಾ?' ಎಂದು ಕೇಳಿದರು. 'ನಾಲ್ಕು ಜಾಗ ತಿರುಗಿ ನೋಡಿದರೇನೆ ಅವನಿಗೂ ಜಗತ್ತು ಗೊತ್ತಾಗೋದು' ಅಮ್ಮ ಅಂದಳು. ಮುತ್ತುಸಾಮಿಯ ತೋಳನ್ನು ಹಿಡಿದುಕೊಂಡು ಅವರು ಪತ್ತುಕ್ಕಣ್ಣಿಗೆ ಹೋಗುವ ದಾರಿಯನ್ನು ವಿವರಿಸಿದ ನಂತರ, 'ಅಲ್ಲಿ ವೀರಪ್ಪ ಕೌಂಡರ್ ಅಂತ ಒಬ್ರು ಸೇತುವೆ ಹತ್ರಾನೆ ಒಂದು ಹೋಟಲ್ ಇಟ್ಟಿದ್ದಾರೆ. ಅಲ್ಲಿ ವಿಚಾರಿಸಿದರೆ ವಿಷಯ ತಿಳಿಯುತ್ತೆ' ಅಂದರು.

ಮಾರನೆಯ ದಿನ ಉಪ್ಪುಹಾಕಿ ಕಲಸಿದ ತಂಗಳನ್ನದ ನೀರನ್ನು ಹೊಟ್ಟೆ ತುಂಬ ಕುಡಿದು ಪತ್ತುಕ್ಕಣ್ಣಿಗೆ ಮುತ್ತುಸಾಮಿ ನಡೆದೇ ಹೊರಟನು. ಆ ಹೋಟೆಲ್ ಸಾಹುಕಾರರು ಅಪ್ಪನನ್ನ ನೋಡಿ ಒಂದು ತಿಂಗಳಿಗೂ ಹೆಚ್ಚಾಯಿತೆಂದು ಹೇಳಿದರು. ಪತ್ತುಕ್ಕಣ್ಣು ಕೆರೆಯಿಂದ ಕವಲೊಡೆದು ಬರುವ ಕಾಲುವೆಯ ಪಕ್ಕದಲ್ಲಿ ಸ್ವಲ್ಪ ಸಮಯ ಕುಳಿತು, ಜರಿ ಸೀರೆಯಂತೆ